ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ವಿಶೇಷಾಧಿಕಾರಿಗಳ ಕಛೇರಿ, ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ.ರಸ್ತೆ, ಬೆಂಗಳೂರು – 560002

ಸಂಖ್ಯೆ: ಸಿಎಸಿ–1/ಡಿ.ಇಡಿ ದಾಖಲಾತಿ–1/2010–11 ದಿನಾಂಕ :23–10–2010

**ಸುತ್ತೋಲೆ**

ಗೆ,

ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರುಗಳು

ಮಾನ್ಯರೇ,

ವಿಷಯ :– 2010–11ನೇ ಸಾಲಿನ ಡಿ.ಇಡಿ/ಡಿ.ಪಿ.ಇಡಿ ಕೋರ್ಸಿನ ಸರ್ಕಾರಿ ಕೋಟಾದ ಉಳಿಕೆ ಸೀಟುಗಳನ್ನು ಆಡಳಿತ ಮಂಡಳಿಯವರು ದಾಖಲಾತಿ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ :– (1) ಡಿ.ಇಡಿ ದಾಖಲಾತಿ ನಿಯಮದ ಸರ್ಕಾರದ ಅಧಿಸೂಚನೆ ಕ್ರಮಾಂಕ ಇಡಿ 233 ಪಿಟಿಐ 2006 ದಿನಾಂಕ 14–09–2007

(2) ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಇವರ ಸುತ್ತೋಲೆ ಕ್ರಮಾಂಕ ಶಿತ–6/ಶೈ.ವೇ.ಪಟ್ಟಿ–18/2010–11 ದಿನಾಂಕ 10–10–2010.

–0–

ಉಲ್ಲೇಖಿತ ವಿಷಯಕ್ಕೆ ಸಂಬಂಧಿಸಿದಂತೆ 2010–11ನೇ ಸಾಲಿನ ಡಿ.ಇಡಿ/ಡಿ.ಪಿ.ಇಡಿ. ಕೋರ್ಸಿನ ಸರ್ಕಾರಿ ಕೋಟಾದ ಸೀಟುಗಳನ್ನು, ಅರ್ಜಿ ಸಲ್ಲಿಸಿದ್ದ ಎಲ್ಲಾ ಅರ್ಹ ಅಭ್ಯರ್ಥಿಗಳಿಗೆ, ನೋಡಲ್ ಕೇಂದ್ರಗಳ(ಡಯಟ್) ಮತ್ತು ಕೇಂದ್ರೀಕೃತ ದಾಖಲಾತಿ ಘಟಕದಿಂದ ಕೌನ್ಸಿಲಿಂಗ್ ಮೂಲಕ ದಾಖಲಾತಿ ನೀಡಲಾಗಿದೆ. 2010–11ನೇ ಸಾಲಿನ ದಾಖಲಾತಿಯ ಕೌನ್ಸಿಲಿಂಗ್ ಮುಕ್ತಾಯವಾಗಿರುತ್ತದೆ.

ಉಲ್ಲೇಖದ ಸರ್ಕಾರದ ಅಧಿಸೂಚನೆಯ ನಿಯಮ 6(8)ರಂತೆ ದಾಖಲಾತಿ ಪ್ರಕ್ರಿಯೆಯು ಮುಗಿದಿದ್ದು, ಉಳಿಕೆ ಸರ್ಕಾರಿ ಕೋಟಾದ ಸೀಟುಗಳನ್ನು ಆಡಳಿತ ಮಂಡಳಿಯವರು ದಾಖಲಾತಿ ಮಾಡಿಕೊಳ್ಳಬಹುದಾಗಿದ್ದು ಅದರಂತೆ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಇವರ ಸುತ್ತೋಲೆ ಕ್ರಮಸಂಖ್ಯೆ ಶಿತ–6/ಶೈ.ವೇ.ಪಟ್ಟಿ–18/2010–11 ದಿನಾಂಕ 10–10–2010 ರಂತೆ ಡಿ.ಇಡಿ ಸಂಸ್ಥೆಗಳು, ಡಯಟ್‌ಗಳಿಗೆ ಪ್ರಸ್ತಾವನೆ ಕಳುಹಿಸುವ ಕೊನೆಯ ದಿನಾಂಕವಾದ 30–10–2010 ರೊಳಗೆ ಉಳಿಕೆ ಸರ್ಕಾರಿ ಕೋಟಾದ ಸೀಟುಗಳನ್ನು ದಾಖಲಾತಿ ಮಾಡಿಕೊಂಡು, ದಿನಾಂಕ 04–11–2010 ರೊಳಗೆ ದಾಖಲಾತಿ ಮಾಡಿಕೊಂಡ ಅಭ್ಯರ್ಥಿಗಳ ಪೂರ್ಣ ವಿವರದ ಒಂದೊಂದು ಪಟ್ಟಿಯನ್ನು ಅನುಮೋದನೆಗಾಗಿ ತಪ್ಪದೆ ವಿಶೇಷಾಧಿಕಾರಿಗಳು ಕೇಂದ್ರೀಕೃತ ದಾಖಲಾತಿ ಘಟಕಕ್ಕೆ ಮತ್ತು ಸಂಬಂಧಿಸಿದ ಡಯಟ್ ಪ್ರಾಂಶುಪಾಲರಿಗೆ ಕಳುಹಿಸಲು ತಿಳಿಸಿದೆ. ನಂತರದ ದಿನಗಳಲ್ಲಿ ದಾಖಲಾತಿ ಮಾಡಿಕೊಳ್ಳುವ ಅಭ್ಯರ್ಥಿಗಳ ದಾಖಲಾತಿಯನ್ನು ಯಾವುದೇ ಕಾರಣಕ್ಕೂ ಅನುಮೋದನೆ ಮಾಡುವುದಿಲ್ಲ.

ಕೇಂದ್ರೀಕೃತ ದಾಖಲಾತಿ ಘಟಕದಿಂದ ಆದೇಶ ಬರುವವರೆವಿಗೆ ಉಳಿಕೆ ಸರ್ಕಾರಿ ಕೋಟಾದ ಸೀಟುಗಳಿಗೆ ಆಡಳಿತ ಮಂಡಳಿಯವರು ಮಾಡಿಕೊಂಡಿರುವ ದಾಖಲಾತಿಯನ್ನು ಡಯಟ್ ಪ್ರಾಂಶುಪಾಲರು ಅನುಮೋದನೆ ಮಾಡಬಾರದಾಗಿ ತಿಳಿಸಿದೆ. ಈ ಕಚೇರಿಯಿಂದ ಸಂಸ್ಥೆಯವರು ದಾಖಲಾತಿ ಮಾಡಿಕೊಂಡಿರುವ ದೃಢೀಕೃತ ಅಭ್ಯರ್ಥಿಗಳ ಪಟ್ಟಿಯನ್ನೊಳಗೊಂಡ ಆದೇಶ ಬಂದ ನಂತರ ಅನುಮೋದನೆ ಮಾಡಬೇಕಾಗಿ ತಿಳಿಸಿದೆ. ದಿನಾಂಕ 30–10–2010 ರೊಳಗೆ ಸಂಸ್ಥೆಗಳಿಂದ ಈ ಕಚೇರಿಗೆ ದಾಖಲಾತಿ ಮಾಡಿಕೊಂಡ ಅಭ್ಯರ್ಥಿಗಳ ಪಟ್ಟಿ ಬಾರದಿದ್ದಲ್ಲಿ 2010–11ನೇ ಸಾಲಿಗೆ ದಾಖಲಾತಿ ಮಾಡಿಕೊಂಡಿಲ್ಲವೆಂದು ಪರಿಗಣಿಸಲಾಗುತ್ತದೆ. ದಿನಾಂಕ 30–10–2010 ರೊಳಗೆ ಈ ಕಛೇರಿಗೆ ದಾಖಲಾತಿ ಮಾಡಿಕೊಂಡ ಬಗ್ಗೆ ಕಳುಹಿಸಿರುವ ಅಭ್ಯರ್ಥಿಗಳ ಪಟ್ಟಿಯನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಗೆ ಕಳುಹಿಸಿಕೊಡಲಾಗುತ್ತದೆ. ಈ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ಮಾತ್ರ ಪರೀಕ್ಷೆಗೆ ಹಾಜರಾಗುವ ಬಗ್ಗೆ ನಿರ್ದೇಶಕರು

(ಇತರೆ ಪರೀಕ್ಷೆಗಳು) ಇವರಿಗೆ ಬರೆಯಲಾಗುವುದು. ಆದ್ದರಿಂದ ದಾಖಲಾತಿ ಮಾಡಿಕೊಂಡಿರುವ ಪಟ್ಟಿಯಲ್ಲಿ ಅಭ್ಯರ್ಥಿಗಳ ವಿವರವನ್ನು ಪರಿಶೀಲಿಸಿ ದಾಖಲಾತಿಗೆ ಅರ್ಹತೆ ಇದ್ದವರನ್ನು ಮಾತ್ರ ದಾಖಲಾತಿ ಮಾಡಿಕೊಂಡು, ವಿವರದ ಪಟ್ಟಿಯನ್ನು ನಿಗದಿತ ದಿನಾಂಕದೊಳಗೆ ಸಲ್ಲಿಸುವಂತೆ ಸಂಸ್ಥೆಯ ಮುಖ್ಯಸ್ಥರಿಗೆ ತಿಳಿಸುವುದು.

ಮೇಲ್ಕಂಡ ವಿಷಯದ ವಿವರವನ್ನು ಸಂಬಂಧಿಸಿದ ಡಯಟ್ ವ್ಯಾಪ್ತಿಯ ಡಿ.ಇಡಿ ಸಂಸ್ಥೆಗಳ ಮುಖ್ಯಸ್ಥರಿಗೆ ತಿಳಿಸುವುದು ಹಾಗೂ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸುವುದು ಮತ್ತು ಉಚಿತವಾಗಿ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆ ನೀಡುವುದು. ಸಂಬಂಧಿಸಿದ ಸಂಸ್ಥೆಗಳ ಪ್ರಾಂಶುಪಾಲರ ಸಭೆ ನಡೆಸಿ ಈ ಬಗ್ಗೆ ತಿಳಿಸುವುದು. ಸರ್ಕಾರಿ ಕೋಟಾದ ಅಭ್ಯರ್ಥಿಗಳನ್ನು ಹಂಚಿಕೆ ಮಾಡಿದ ನಂತರ ಉಳಿಕೆ ಸೀಟುಗಳ ವಿವರವನ್ನು ಡಯಟ್ ವ್ಯಾಪ್ತಿಗೊಳಗೊಂಡಂತೆ ಸಂಸ್ಥೆವಾರು ಮತ್ತು ಮಾಧ್ಯಮವಾರು ಹಾಗ ಪ್ರವರ್ಗವಾರು ಪಟ್ಟಿಯನ್ನು ಈ ಸುತ್ತೋಲೆಯ ಜೊತೆ ಲಗತ್ತಿಸಿದೆ. ಖಾಲಿ ಉಳಿದ ಪ್ರವರ್ಗದ ಅಭ್ಯರ್ಥಿಗಳನ್ನೇ ದಾಖಲಾತಿ ಮಾಡಿಕೊಳ್ಳಲು ತಿಳಿಸುವುದು. ಸೂಚಿತ ಪ್ರವರ್ಗದ ಅಭ್ಯರ್ಥಿಗಳನ್ನು ಹೊರತುಪಡಿಸಿ ಬೇರೆ ಪ್ರವರ್ಗದ ಅಭ್ಯರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳುವಂತಿಲ್ಲ. ಮಾಧ್ಯಮವಾರು ಮತ್ತು ಪ್ರವರ್ಗವಾರು ಲಭ್ಯವಿರುವ ಸರ್ಕಾರಿ ಕೋಟಾದ ಉಳಿಕೆ ಸೀಟುಗಳ ವಿವರವು **www.schooleducation.kar.nic.in** ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

ಮೇಲ್ಕಂಡ ವಿಷಯದ ಬಗ್ಗೆ ಡಯಟ್ ಪ್ರಾಂಶುಪಾಲರು ಹಾಗೂ ಡಿ.ಇಡಿ ಸಂಸ್ಥೆಗಳ ಮುಖ್ಯಸ್ಥರು ದಾಖಲಾತಿ ನಿಯಮದಂತೆ ಕಟ್ಟುನಿಟ್ಟಾಗಿ ಕಾರ್ಯ ನಿರ್ವಹಿಸಲು ಸೂಚಿಸಿದೆ.

(ಕ.ಪ್ರ.ವಿಶೇಷಾಧಿಕಾರಿಗಳಿಂದ
ಅನುಮೋದಿತ)

ತಮ್ಮ ನಂಬುಗೆಯ

ವಿಶೇಷಾಧಿಕಾರಿಗಳ ಪರವಾಗಿ.

ಪ್ರತಿಯನ್ನು:

1) ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ
2) ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ
3) ಸಂಬಂಧಿಸಿದ ಡಿ.ಇಡಿ. ಸಂಸ್ಥೆಯ ಮುಖ್ಯಸ್ಥರಿಗೆ